ಇದ್ದರೂ ಗಾಂಧೀಜಿ ಕೂಡಲೇ ಅದನ್ನು ಬದಲಾಯಿಸಿ ಬರುತ್ತಿದ್ದರು ಎಂದು ಸರೋಜಿನಿ ನಾಯ್ಡು ಬರೆದುಕೊಂಡಿದ್ದಿದೆ. ಚಾಪ್ಲಿನ್ ನಗಿಸಲಾಗದೆ ಹೋದ ಒಬ್ಬ ವ್ಯಕ್ತಿ ಗಾಂಧಿ ಎಂಬ ಒಂದು ಪ್ರತೀತಿ ಇತ್ತು 80ರ ದಶಕದಲ್ಲಿ.

ಗಾಂಧೀಜಿಯ ಅಗಾಧತೆಯನ್ನು ಹಿಡಿದಿರಿಸಲು ಇರುವ ಸಂಕಷ್ಟದಿಂದಾಗಿಯೇ ಕಲಾವಿದರು ಅವರ ಒಂದು ಸರಳೀಕೃತ ಆಕಾರಕ್ಕೆ ಅಂಟಿಕೊಂಡರೆ? ಎಂಬ ಅನುಮಾನವಿದೆ. ಏಕೆಂದರೆ ಲಿಯೊನಾರ್ಡೊ ಡಾ ವಿಂಚಿಯಂತೆ ಗಾಂಧಿ ಒಬ್ಬ 'ರೆನಾಯಸಾನ್ಸ್ ಮ್ಯಾನ್' ಆಗಿದ್ದರು: ಒಬ್ಬ ನ್ಯಾಯಾಧೀಶ, ಲೇಖಕ, ಸಂಪಾದಕ, ಸಮಾಜ ಸೇವಕ, ರಾಜಕಾರಣಿ, ಪರಿಸರವಾದಿ, ಇತ್ಯಾದಿ ಬಹುರೂಪಿ ಪಾತ್ರಗಳನ್ನು ಅವರು ವಹಿಸಿದ್ದಿದೆ. ಆದರೆ ರಾಷ್ಟ್ರಪಿತನ ಪಾತ್ರವನ್ನು ಆರೋಪಿಸುವುದರ ಮೂಲಕ ಗಾಂಧಿಯ ವೈವಿಧ್ಯವನ್ನು ನಮ್ಮ ನಿರೂಪಣಾ ಕಾರ್ಖಾನೆಯು ನಾಶಮಾಡಿತೆ ಎಂಬ ಅನುಮಾನ ಇಂದಿಗೂ ಇದೆ: ಅವರ ಕನ್ನಡಕ, ಕೋಲು, ಧೋತಿ, ನಡೆವ ಭಂಗಿ, ಅವರ ಪ್ರಸಿದ್ಧ ಹೇಳಿಕೆಗಳು ('ಕಣ್ಣಿಗೊಂದು ಕಣ್ಣೆಂದರೆ ಇಡೀ ಜಗತ್ತೇ ಕುರುಡಾಗುತ್ತದೆ'), ಇತ್ಯಾದಿಗಳನ್ನು ಆಧರಿಸಿ ಕಲಾವಿದರು ಅವರ ವ್ಯಕ್ತಿತ್ವದ ಅನಂತತೆಯನ್ನು ಚೌಕಟ್ಟಿನ 'ಅಂತ'ಕ್ಕೆ ತಂದಿರಿಸಿದ್ದಿದೆ. ಗಾಂಧಿ ಕನ್ನಡಕ ತೊಟ್ಟ ಛಾಯಾಚಿತ್ರಗಳು ಅಪರೂಪ. ಸ್ವತಃ ಗಾಂಧಿಯೇ 'ಗಾಂಧೀ ಟೊಪ್ಪಿ' ತೊಟ್ಟ ಚಿತ್ರಗಳಂತೂ ಇಲ್ಲವೇ ಇಲ್ಲ.



ನಂದಲಾಲ್ ಬೋಸ್ ಅವರ ಗಾಂಧಿ ಉಬ್ಬುಗೆತ್ತನೆ

ಭಾರತದಾದ್ಯಂತ ಇರುವ 'ಗಾಂಧಿ ಭವನ'ಗಳ ಮೇಲೆ ಇರುವ, ಎಡಕ್ಕೆ ನಡೆದು ಹೋಗುತ್ತಿರುವ ಗಾಂಧಿಯ ತಿರುಗು ಉಬ್ಬುಗೆತ್ತನೆಯ ಅಸಲಿ ಕೃತಿಯನ್ನು ಅದೇ ಆಳೆತ್ತರದಲ್ಲಿ ಮೊದಲು 1930ರಲ್ಲಿ ಸೃಷ್ಟಿಸಿದವರು ಕಲಾವಿದ ನಂದಲಾಲ್ ಬೋಸ್ ಅವರು. 2010ರ ವರೆಗೂ ಅದು ಶಾಂತಿನಿಕೇತನದ ಕಲಾಭವನದ ಕಲಾ ಇತಿಹಾಸ ವಿಭಾಗದ ಹಿಂದಿನ ಗೋಡೆಯ ಮೇಲೆ ವಿರಾಜಮಾನವಾಗಿತ್ತು – ಮೋರಿ ನೀರಿನ ಸ್ವಾದವನ್ನು ಸವಿಯುತ್ತ. 'ಶುಚಿತ್ವವು ದೈವತ್ವದ ಬದಿಗಿರುವಂತಹದ್ದು' ಎಂದು ಸಾರಿದ ಮಹಾತ್ಮನಿಗೆ ಇದು ಸೂಕ್ತ ಮನ್ನಣೆಯ ತಾಣವೆಂತಲೂ ಅನ್ನಿಸದಿರದು.




ಗಾಂಧಿ ಸಂದೇಶಗಳ ಭಿತ್ತಿಚಿತ್ರ

★★★

ಭಾರತದ ಅತ್ಯಂತ ಜನಪ್ರಿಯ ದೃಶ್ಯ ಕಲಾವಿದರೆಲ್ಲರೂ ಗಾಂಧಿಯನ್ನು ಒಂದಲ್ಲಾ ಒಂದು ಹಂತದಲ್ಲಿ ನಿರೂಪಿಸಿದ್ದಿದೆ. ಆದರೆ ಭಾರತಕ್ಕೆ ತಮ್ಮ ಮಧ್ಯವಯಸ್ಕ ಸ್ಥಿತಿಯಲ್ಲಿ ಮರಳಿದ ನಂತರದ ಗಾಂಧಿಯೇ ಇವರೆಲ್ಲರ ಕೃತಿಗಳಲ್ಲಿ ಆಯ್ಕೆಗೊಂಡದ್ದು ವಿಶೇಷ (ಎಂ.ಎಫ್.ಹುಸೇನ್, ಆದಿಮೂಲಂ ಮುಂತಾದವರು). 21ನೇ ಶತಮಾನದ ನಂತರ, ಏಳು ದಶಕದ ನಂತರದಲ್ಲಿ ಮಾತ್ರ ಗಾಂಧೀಜಿಯನ್ನು ಕಡಿಮೆ ರೂಪನಿಷ್ಠವಾಗಿ, ಹೆಚ್ಚು ಸಾಂಕೇತಿಕವಾಗಿ, ವಿಮರ್ಶಾತ್ಮಕವಾಗಿ ಚಿತ್ರಗಳಲ್ಲಿ ಕಾಣಬಹುದಾಗಿದೆ. ಗಾಂಧಿಯನ್ನು ಯಾವಾಗಲೂ ಅಜ್ಜನಂತೆಯೂ ನೆಹರೂವನ್ನು ಚಾಚಾ ಎಂತಲೂ